**ಓ.ಎಸ್. ನಂಃ 216/2023**

**ಪಿ.ಡಬ್ಲ್ಯೂಃ 1**

**ದಿನಾಂಕ 25.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಹೆಚ್.ಕೆ.ಹೆಚ್. ವಕೀಲರಿಂದಃ</u>**

1. ನಾನು ಬಿ.ಎ. ಪದವೀಧರನಾಗಿರುತ್ತೇನೆ. ದಾವಾ ಆಸ್ತಿಯು ನನಗೆ ಸೇರಿದ ಆಸ್ತಿಯಾಗಿದ್ದು, ಪ್ರತಿವಾದಿಯು ದಾವಾ ಆಸ್ತಿಯನ್ನು ಸುಳ್ಳಾಗಿ ತನಗೆ ಸೇರಿರುತ್ತದೆ ಎಂದು ಹೇಳಿ ತೊಂದರೆ ಕೊಟ್ಟ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ. ನಾನು ದಾವಾ ಆಸ್ತಿಯ ಮಾಲೀಕನಲ್ಲ ಮತ್ತು ದಾವಾ ಆಸ್ತಿಯು ತನಗೆ ಸೇರಿರುತ್ತದೆ ಎಂದು ಪ್ರತಿವಾದಿಯು ನನ್ನ ಮಾಲೀಕತ್ವವನ್ನು ಅಲ್ಲಗಳೆದು ತನ್ನನ್ನೆ ದಾವಾ ಆಸ್ತಿಯ ಮಾಲೀಕ ಎಂದು ಪ್ರತಿಪಾದಿಸುತ್ತಿದ್ದಾರೆ. ಈ ದಾವೆಯನ್ನು ಹೂಡಲು ಯಾವುದೆ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಯರು ದಾವಾ ಆಸ್ತಿಗೆ ಬಂದು ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ನಾನು ಈ ನ್ಯಾಯಾಲಯದಲ್ಲಿ ಈ ದಾವೆಯನ್ನು ಹೂಡಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಾಧಿಕಾರದ ಮುಂದೆ ಪ್ರತಿವಾದಿಯರ ವಿರುದ್ಧ ದೂರನ್ನು ನೀಡಿರುವುದಿಲ್ಲ. ದಿನಾಂಕ 20.05.2013 ರಂದು ನಿಪಿ.1 ರ ಕ್ರಯ ಪತ್ರವನ್ನು ಭಾರತಿರವರು ನನ್ನ ತಂದೆಯಾದ ಪುಟ್ಟಸ್ವಾಮಿಶೆಟ್ಟಿರವರಿಗೆ ಬರೆದುಕೊಟ್ಟಿರುತ್ತಾರೆ. ನಿಪಿ.1 ರ ಕ್ರಯ ಪತ್ರವನ್ನು ನನ್ನ ತಂದೆಗೆ ಬರೆದು ಕೊಡಲು ಸದರಿ ಭಾರತಿ ಕೋಂ.ರಾಮೇಗೌಡ ಇವರಿಗೆ ಯಾವುದೆ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸದರಿ ಭಾರತಿ ಕೋಂ.ರಾಮೇಗೌಡರಿಗೆ ಯಾರಿಂದ ಮತ್ತು ಯಾವ ಮೂಲದಿಂದ ಬಂದಿದೆ ಎಂದು ನಾನು ಮತ್ತು ನನ್ನ ತಂದೆ ತಿಳಿದುಕೊಂಡಿರುತ್ತೇವೆ.

3. ದಾವಾ ಆಸ್ತಿಯು ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/4 ಡಿ ರಲ್ಲಿ ಇರುತ್ತದೆ. ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/4 ಡಿ ರಲ್ಲಿ ಭಾರತಿ ಕೋಂ.ರಾಮೇಗೌಡ ಇವರು 7 ½ ಗುಂಟೆ ಜಮೀನನ್ನು ಖರೀದಿಸಿದ್ದರು. ಸದರಿ 7 ½ ಗುಂಟೆ ಜಮೀನನ್ನು ಭಾರತಿ ಕೋಂ.ರಾಮೇಗೌಡರು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಅವರ ಹೆಸರು ಮರೆತು ಹೋಗಿದ್ದು, ಅದರ ಸಂಬಂಧ

ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/4 ಡಿ ರಲ್ಲಿ ಭಾರತಿ ಕೋಂ.ರಾಮೇಗೌಡ ಇವರು 7 ½ ಗುಂಟೆ ಜಮೀನನ್ನು ಖರೀದಿಸಿ ದಾಖಲೆ, ಸದರಿ 7 ½ ಗುಂಟೆ ಜಮೀನನ್ನು ಭಾರತಿರವರು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿದ ದಾಖಲೆ, ಸದರಿ ಭಾರತಿರವರು ದಾವಾ ಆಸ್ತಿಯ ಸಂಬಂಧ ನನ್ನ ತಂದೆಯ ಹೆಸರಿಗೆ ಬರೆದುಕೊಟ್ಟ ಕ್ರಯ ಪತ್ರ, 2013 ರಿಂದ ನಾವು ದಾವಾ ಆಸ್ತಿಯ ಸಂಬಂಧ ತೆರಿಗೆ ಪಾವತಿಸಿದ ರಸೀದಿ ಹಾಗೂ ದಾವಾ ಆಸ್ತಿ ನನ್ನ ಹೆಸರಿಗೆ ಆದ ದಾನ ಪತ್ರವನ್ನು ಮತ್ತು ಖಾತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

4. ನಾನು ಕೇವಲ 3 ದಾಖಲೆಗಳನ್ನು ಮಾತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು ಸಹ ಮೇಲೆ ಹೇಳಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೇ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/4 ಡಿ ರಲ್ಲಿ ಭಾರತಿ ಕೋಂ.ರಾಮೇಗೌಡ ಇವರು 7 ½ ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿ ನಿವೇಶನಗಳನ್ನಾಗಿ ಪರಿವರ್ತಿಸಿರುವ ದಾಖಲೆಗಳನ್ನು ನಾನು ನೋಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/4 ಡಿ ರಲ್ಲಿ ಭಾರತಿ ಕೋಂ.ರಾಮೇಗೌಡ ಇವರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ನಿವೇಶನ ಅನುಮೋದನೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

5. ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/ಡಿ4 ರ 28 ½ ಗುಂಟೆ ಜಮೀನಿನ ಸ್ವಾಧೀನದಲ್ಲಿ ಪ್ರತಿವಾದಿಯರೇ ಇದ್ದು, ನಂತರದಲ್ಲಿ ಸದರಿ ಜಮೀನನ್ನು ರಿ-ಸರ್ವೇ ಮಾಡಿಸಿಕೊಂಡು ಸದರಿ ಜಮೀನಿಗೆ ಹೊಸ ಸರ್ವೇ ನಂಬರ್ 147 ಎಂದು ನಂಬರಾದ ಬಳಿಕ 25 ಗುಂಟೆಯ ಸ್ವಾಧೀನದಲ್ಲಿ ಪ್ರತಿವಾದಿಯರೇ ಇದ್ದಾರೆ ಎಂದರೆ ಸರಿಯಲ್ಲ.

6. ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/4 ಡಿ ರಲ್ಲಿ ಭಾರತಿ ಕೋಂ.ರಾಮೇಗೌಡ ಇವರು 7 ½ ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿರುತ್ತಾರೆ. ಸರ್ವೇ ನಂಬರ್ 118/4 ಡಿ ಹಾಗೂ ಸರ್ವೇ ನಂಬರ್ 118/ಡಿ4 ಇವೆರಡು ಬೇರೆ ಬೇರೆ ಸರ್ವೇ ನಂಬರುಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಯು

ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ.  ಸರ್ವೇ ನಂಬರ್ 118/4 ಡಿ ಹಾಗೂ ಸರ್ವೇ ನಂಬರ್ 118/ಡಿ4 ಇವು ಮೂಲತಃ ಯಾರಿಗೆ ಸೇರಿತ್ತು ಎಂದು ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯ ಮೂಲಕ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ದಾವಾ ಆಸ್ತಿಯ ಮೂಲಕ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದಿದ್ದರು ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. 2001 ರಿಂದ 2013 ರ ವರೆಗೂ ದಾವಾ ಆಸ್ತಿಯ ಖಾತೆಯು ಭಾರತಿ ಕೋಂ.ರಾಮೇಗೌಡರವರ ಹೆಸರಿನಲ್ಲಿದ್ದು, ದಾವಾ ಆಸ್ತಿಯನ್ನು 2013 ರಲ್ಲಿ ಖರೀದಿಸಿದ ನಂತರದಲ್ಲಿ ನನ್ನ ತಂದೆಯ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆಯು ಮುಂದುವರೆಯುತ್ತಾ ಬಂದಿರುತ್ತದೆ. ದಾವಾ ಆಸ್ತಿಯ ಮೂಲ ದಾಖಲಾತಿಗಳನ್ನು ಪರಿಶೀಲಿಸದೇ ನನ್ನ ತಂದೆಯವರು ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/ಡಿ4 ರ ಆಸ್ತಿಯನ್ನು ಅಕ್ರಮವಾಗಿ ತಮ್ಮಹೆಸರಿಗೆ ಖಾತೆ ವರ್ಗಾವಣೆ ಮಾಡಿ ಭಾರತಿ ಕೋಂ. ರಾಮೇಗೌಡರು ದಾವಾ ಆಸ್ತಿಯನ್ನು ನಿಮ್ಮ ತಂದೆಯವರಿಗೆ ಮಾರಾಟ ಮಾಡಿರುವ ವಿಷಯ ನಿಮಗೆ ಮತ್ತು ನಿಮ್ಮ ತಂದೆಗೆ ಗೊತ್ತಿಲ್ಲ ಎಂದರೆ ಭಾರತಿ ಕೋಂ. ರಾಮೇಗೌಡರು ದಾವಾ ಆಸ್ತಿಯನ್ನು ನಮಗೆ ಅಕ್ರಮವಾಗಿ ಮಾರಾಟ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

8. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಜಗಳ ನಡೆದಿರುವುದಿಲ್ಲ. ದಾವಾ ಆಸ್ತಿಯು ಮನುಗನಹಳ್ಳಿ ಗ್ರಾಮ ಯಾವ ಸರ್ವೇ ನಂಬರಿನಲ್ಲಿ ಇರುತ್ತದೆ ಎಂದು ಮಾರಾಟಗಾರರಾದ ಭಾರತಿರವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಭಾರತಿ ಕೋಂ.ರಾಮೇಗೌಡರ ಹೆಸರಿಗೆ ಕೇವಲ ದಾವಾ ಆಸ್ತಿಯ ಖಾತೆ ಮಾತ್ರ ಇದ್ದು, ಅವರು ಎಂದಿಗೂ ಸಹ ದಾವಾ ಆಸ್ತಿಯ ಭೌತಿಕ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

9. ಇದೇ ದಾವಾ ಆಸ್ತಿ ಮತ್ತು ಮನುಗನಹಳ್ಳಿ ಗ್ರಾಮದ ಸರ್ವೇ ನಂಬರ್ 118/4 ಡಿ ಆಸ್ತಿಯ ಸಂಬಂಧ ಇದೇ ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಯ ಮಾರಾಟಗಾರರಾದ ಭಾರತಿ ಕೋಂ.ರಾಮೇಗೌಡರು ಕೆ.ಆರ್.ನಗರದ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಘೋಷಣಾತ್ಮಕ ಹಾಗೂ ನಿರ್ಬಂಧಕಾಜ್ಞೆ

ಪರಿಹಾರ ಕೋರಿ ಅಸಲು ದಾವೆ ಸಂಖ್ಯೆ 12/2023 ರ ದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

10. ದಾವಾ ಆಸ್ತಿ ಎಲ್ಲಿ ಬರುತ್ತದೆ ಎಂದು ನನ್ನ ತಂದೆಯವರಿಗೆ ಗೊತ್ತಿರದ ಕಾರಣ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ದಾನವಾಗಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕಾರಣ ಅಕ್ರಮವಾಗಿ ದಾವಾ ಆಸ್ತಿಯನ್ನು ಪ್ರತಿವಾದಿಯರಿಂದ ಕಬಳಿಸುವ ಉದ್ದೇಶದಿಂದ ನನ್ನ ತಂದೆ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ದಾನವಾಗಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

11. ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ -ನಿವೇಶನ ಸಂಖ್ಯೆ-2, ಪಶ್ಚಿಮಕ್ಕೆ-ರಸ್ತೆ, ಉತ್ತರಕ್ಕೆ-ಖಾಸಗಿ ವ್ಯಕ್ತಿಯ ಜಮೀನು ಹಾಗೂ ದಕ್ಷಿಣಕ್ಕೆ-ರಸ್ತೆ ಇದೆ. ದಾವಾ ಆಸ್ತಿಯ ಅಸೆಸ್‌ಮೆಂಟ್ ಸಂಖ್ಯೆ 9866 ಆಗಿರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ–ಪಶ್ಚಿಮ 40 ಅಡಿ, ಉತ್ತರ–ದಕ್ಷಿಣ 30 ಅಡಿ ಇರುತ್ತದೆ. ಸುಳ್ಳು ಚೆಕ್ಕುಬಂಧಿಗಳನ್ನು ಮತ್ತು ಸುಳ್ಳು ವಿಸ್ತೀರ್ಣವನ್ನು ಸೃಷ್ಟಿಸಿ ಭಾರತಿ ಕೋಂ.ರಾಮೇಗೌಡರು ರವರು ನನ್ನ ತಂದೆಗೆ ದಾವಾ ಆಸ್ತಿಯ ಸಂಬಂಧ ಸುಳ್ಳು ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

12. ಕೇವಲ 7 ½ ಗುಂಟೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವ ಬದಲು ಹೆಚ್ಚುವರಿಯಾಗಿ 10 ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿ ಸುಳ್ಳು ದಾಖಲಾತಿಗಳ ಆಧಾರದ ಮೇಲೆ ಭಾರತಿ ಕೋಂ.ರಾಮೇಗೌಡರು ರವರು ನನ್ನ ತಂದೆಗೆ ದಾವಾ ಆಸ್ತಿಯ ಸಂಬಂಧ ಸುಳ್ಳು ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**